ಬಗ್ಗೆ ಪೂರ್ತಿ ಇನ್‌ಫರ್‌ಮೆಷನ್ ಕೇಳಿದ್ದೇವೆ, ಅದು ಬರಬಹುದು. ಮಾನ್ಯ ಅಧ್ಯಕ್ಷರೇ, ತಾನೆ ನನಗೆ ಬಂದ ಮಾಹಿತಿ ಪ್ರಕಾರ, ೧೯೭೯-೮೦, ೧೯೮೦-೮೧ ಈ ಎರಡು ವರ್ಷದ ಜರದಿಯಂನ್ನು ೫-೩-೮೪ಕ್ಕೆ ಸದನದ ಮುಂದೆ ಇಟ್ಟಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಕರ್ನಾಟಕ ಜಾಗೃತ ಆಯೋಗಕ್ಕೆ ಸಂಬಂಧಿಸಿದ ಐ.ಎ.ಎಸ್. ಐ.ಪಿ.ಎಸ್. ಅಧಿಕಾರಿಗಳು ತಪ್ಪು ಮಾಡಿದರೆ ಏನಾದರೂ ಕ್ರಮ ತೆಗೆದುಕೊಳ್ಳಲು ಅವಕಾಶ ಇದೆಯೇ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ವಿಜಿಲೆನ್ಸ್ ಕಮೀಷನರ್‌ರವರ ಜ್ಯುರಿಸ್‌ಡಿಕ್ಷನ್ ಎಲ್ಲಾ ಅಧಿಕಾರಿಗಳ ಮೇಲೆ ಅಂದರೆ ಐ.ಎ.ಎಸ್, ಐ.ಪಿ.ಎಸ್, ಮತ್ತು ಕೆ.ಎ.ಎಸ್ ಅಧಿಕಾರಿಗಳ ಮೇಲೂ ಇದೆ. ಅವರು ಮಾಡಿರುವ ತಪ್ಪು ಯಾವುದೇ ಆಗಿರಲಿ, ಯಾವುದೇ ಭ್ರಷ್ಟಾಚಾರವೇ ಆಗಿರಲಿ ಇತರೇ ಅಧಿಕಾರಿಗಳ ಮೇಲೆ ಸರ್ಕಾರ ಏನು ನಿರ್ಣಯ ತೆಗೆದುಕೊಳ್ಳುತ್ತದೋ ಹಾಗೆಯೇ ಅವರ ಮೇಲೂ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಐ.ಎ.ಎಸ್ ಮತ್ತು ಐ.ಪಿ.ಎಸ್ ಅಧಿಕಾರಿಗಳ ವಿಚಾರದಲ್ಲಿ ನಿರ್ಣಯ ತೆಗೆದುಕೊಳ್ಳಬೇಕಾದರೆ ಕೇಂದ್ರ ಸರ್ಕಾರದ ಅಪ್ರೂವಲ್ ಬೇಕಾಗುತ್ತದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ತಾವು ೧೯೭೮ರಿಂದ ಹಿಡಿದು ೧೯೮೩-೮೪ರವರೆಗೆ ಅಂದರೆ ೪ ವರ್ಷದವರೆಗೆ ಅನೇಕ ವಿವಿಧ ಇಲಾಖೆಗಳಿಂದ ತಡವಾಗಿ ಬಂದಿರತಕ್ಕಂಥಾ ವರದಿಗಳನ್ನು ತಾವೇ ಒಪ್ಪಿಕೊಂಡಿದ್ದೀರಿ. ಈ ರೀತಿಯಾಗಿ ತಡವಾಗಿ ಕಳುಹಿಸಿರತಕ್ಕಂಥಾ ಅಧಿಕಾರಿಗಳ ಮೇಲೆ ಇದುವರೆಗೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ?

ಎರಡನೆಯದಾಗಿ ಇದರಲ್ಲಿ ೪೭೫ ಪ್ರಕರಣಗಳ ಪೈಕಿ ಜೊತೆಗೆ ೧೦೩ ಪ್ರಕರಣಗಳನ್ನು ಕಳಿದರೆ ಸುಮಾರು ೩೭೨ ಪ್ರಕರಣಗಳು ಇವೆ ಎಂದು ಗೊತ್ತಾಗುತ್ತದೆ. ಇದರಲ್ಲಿ ಕ್ಲಾಸ್ ಒಂದು, ಕ್ಲಾಸ್ ಎರಡು, ಕ್ಲಾಸ್ ಮೂರು, ಈ ರೀತಿ ಕ್ಲಾಸಿಫಿಕೇಷನ್ ಮಾಡಿದರೆ ಒಟ್ಟು ಎಷ್ಟು ಜನರಿದ್ದಾರೆ ಅನ್ನುವುದನ್ನು ಹೇಳಂತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಕೇಳಿದ ೨ನೇ ಪ್ರಶ್ನೆಗೆ ಉತ್ತರ ಹೇಳಬೇಕಾದರೆ ಅದರ ಬಗ್ಗೆ ನೋಟೀಸ್ ಕೊಟ್ಟರೆ ವಿವರಣೆಯನ್ನು ಹೇಳುತ್ತೇನೆ ಈಗ ಹೇಳುವುದಕ್ಕೆ ಸಾಧ್ಯವಿಲ್ಲ.

ಮೊದಲನೇ ಪ್ರಶ್ನೆಗೆ ಉತ್ತರ ಹೇಳಬೇಕಾದರೆ ತಡವಾಗಿರುವುದಕ್ಕೆ ನಾವು ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕಂ ಅನ್ನುವುದರ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಳ್ಳಬೇಕಾಗುತ್ತದೆ.

ಜಮಖಂಡಿ ತಾಲ್ಲೂಕಿನ ಬನಹಟ್ಟಿ ದವಾಖಾನೆಯ ವೈದ್ಯಾಧಿಕಾರಿ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ.

೯೫. ಜಿ. ಎಸ್. ಬಾಗಲಕೋಟೆ (ಜಮಖಂಡಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ಜಮಖಂಡಿ ತಾಲ್ಲೂಕಿನ ಬನಹಟ್ಟಿ ಮತ್ತು ಸಾವಳಗಿ ದವಾಖಾನೆಯಲ್ಲಿ ಸ್ತ್ರೀ ವೈದ್ಯಾಧಿಕಾರಿಗಳ ಹುದ್ದೆ ಕಳೆದ ಅನೇಕ ವರ್ಷಗಳಿಂದ ಖಾಲಿಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಆದರಿಂದ, ಆ ಭಾಗದ ಜನರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಸರ್ಕಾರದವರು ಆದ್ಷಿಗೆ ಕೂಡಲೇ ವೈದ್ಯಾಧಿಕಾರಿಗಳನ್ನು ನೇಮಿಸುವರೆ ?

ಶ್ರೀ ಪಿ. ಜಿ. ಆರ್.ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು):—

ಅ) ಬಂದಿದೆ.

ಆ) ಹೌದು.

ಇ) ನೇಮಿಸಲಾಗುವುದು.

ಶ್ರೀ ಜಿ. ಎಸ್. ಬಾಗಲಕೋಟಿ.—ಮಾನ್ಯ ಅಧ್ಯಕ್ಷರೇ, ಜಮಖಂಡಿ ತಾಲ್ಲೂಕಿನಲ್ಲಿ ಸುಮಾರು ೭೦ ಸಾವಿರ ಜನಸಂಖ್ಯೆ ಇದ್ದಾರೆ. ಅದು ಬಹಳ ಹೆಚ್ಚಾಗಿರತಕ್ಕಂಥ ತೂಲಿಕಾರರು, ಕಾರ್ಮಿಕರು ಮತ್ತು ನೇಕಾರರು ಇರತಕ್ಕಂಥಾ ದೊಡ್ಡ ನಗರ. ಇಲ್ಲಿ ದವಾಖಾನೆಯಲ್ಲಿ ಸುಮಾರು ೪–೫ ವರ್ಷಗಳಿಂದಲೂ ಕೂಡ ಮಹಿಳಾವೈದ್ಯರು ಇಲ್ಲದೇ ಬಹಳ ತೊಂದರೆಯಾಗಿದೆ. ಈ ಜನರು ಏನಾದರೂ ಆಸ್ಪತ್ರೆಗೆ ಹೋಗಬೇಕಾದರೆ ಸಾವಲಗಿಗೆ ಹೋಗಬೇಕಾಗುತ್ತದೆ. ಸಾವಲಗಿ ದವಾಖಾನೆಗೆ ಸುಮಾರು ೨೦–೩೦ ಹಳ್ಳಿಗಳು ಸೇರಿವೆ. ಆದುದರಿಂದ ಕೂಡಲೇ ಅಲ್ಲಿಗೆ ಒಬ್ಬ ಮಹಿಳಾವೈದ್ಯರನ್ನು ಹಾಕಬೇಕಾಗಿ ಕೋರುತ್ತೇನೆ. ನಿಜ ದಿವಸ ಅಥವಾ ಒಂದು ತಿಂಗಳೊಳಗೆ ಅಲ್ಲಿಗೆ ಮಹಿಳಾ ವೈದ್ಯರನ್ನು ಹಾಕಿಕೊಟ್ಟರೆ ತುಂಬಾ ಉಪಕಾರ ಮಾಡಿದಂತಾಗುತ್ತದೆ ಎಂದು ನಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸದ್ಯದಲ್ಲಿ ಅಲ್ಲಿಗೆ ಮಹಿಳಾ ವೈದ್ಯರನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೇನೆ.

982 SRI B.B. CHIMMANAKATTI, (Badami).—Will the Minister for Food & Civil Supplies be pleased to state.

a) Whether the Government are aware of the food grains required by the people of Bijapur District (through the fair price shops).

b) If so what are the quantities of foodgrains allotted and supplied, (taluk wise particulars may be furnished)

c) Whether the scheme of supply of fair priced food grains will be extended to each village ?

SRI G. BASAVANNAPPA. (Minister for food & Civil Supplies)

a) Yes

b) Statement appended

c) It has been extended already.